**ಒ.ಎಸ್. ನಂ. 164/2016** **ಪಿ.ಡಬ್ಲ್ಯೂ - 3**

ದಿನಾಂಕಃ **15.02.2021** ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿಯರ ಪರ ಶ್ರೀ ಬಿ.ಎಂ.ಜೆ. ವಕೀಲರಿಂದ,**

1. ನನ್ನ ಊರು ಆಲಂಬಾಡಿ ಗ್ರಾಮ, ವಾದಿ ಮತ್ತು 1ನೇ ಪ್ರತಿವಾದಿ ಗೊತ್ತು. ವಾದಿ ಅಪ್ಪಾಜಾಚಾರ್ ಇವರ ಮಗ ಮತ್ತು 1ನೇ ಪ್ರತಿವಾದಿಯು ರಾಜಾಚಾರ್ ಅವರ ಮಗ. ಅಪಾಜಾಚಾರ್ ತಂದೆ ಹೆಸರು ಲಿಂಗಾಚಾರ್. ಸದರಿ ಲಿಂಗಾಚಾರ್ ರವರಿಗೆ ಇಬ್ಬರು ಗಂಡು ಮಕ್ಕಳು ಇದ್ದು ಹೆಣ್ಣು ಮಕ್ಕಳಿಲ್ಲ. ಚಿಕ್ಕಬಸವಾಚಾರ್ ಗೊತ್ತು ಅವರ ಹೆಂಡತಿ ಹೆಸರು ನಿಂಗಮ್ಮ. ಸದರಿ ಇಬ್ಬರಿಗೂ ಮಕ್ಕಳಿಲ್ಲ ಎಂದರೆ ಸರಿ. ಹಾಗಾಗೀ ಚಿಕ್ಕಬಸವಾಚಾರ್ ಮತ್ತು ನಿಂಗಮ್ಮ ಇವರ ಅರೈಕೆಯನ್ನು ರಾಜಾಚಾರ್ ಮತ್ತು ಅವರ ಮಕ್ಕಳು ನೋಡಿ ಕೊಳ್ಳುತ್ತಿದ್ದರು ಎಂದರೆ ಸರಿ. ಪ್ರತಿವಾದಿಯರು ತಮ್ಮ ಜಮೀನುಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ವಿಭಾಗ ಮಾಡಿಕೊಂಡಿಲ್ಲ ಎಲ್ಲರೂ ಒಟ್ಟಿಗೆ ಇದ್ದಾರೆ ಎನ್ನುತ್ತಾರೆ. ವಾದಿ ಐದು ಆಸ್ತಿಗಳಿಗೆ ಸಂಬಂದಪಟ್ಟಂತೆ ದಾವೆ ಹೂಡಿದ್ದಾರೆ. ದಾವಾ ಸ್ವತ್ತುಗಳು ಯಾರ ಹೆಸರಿಗೆ ಖಾತೆಯಾಗಿವೆ ಎಂದು ಗೊತ್ತಿಲ್ಲ. ಪ್ರತಿವಾದಿಯರು ಯಾವ ಸರ್ವೆ ನಂಬರು ಜಮೀನುಗಳಲ್ಲಿ ಬೇಸಾಯ ಮಾಡುತ್ತಿದ್ದಾರೆ ಹಾಗೂ ವಾದಿಯರು ಯಾವ ಸರ್ವೆ ನಂಬರುಗಳಲ್ಲಿ ಬೇಸಾಯ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಅದು ಗೊತ್ತಿಲ್ಲ ಅದರೆ ಎಲ್ಲರೂ ಒಟ್ಟಿಗೆ ಬೇಸಾಯ ಮಾಡುತ್ತಿದ್ದಾರೆ ಎನ್ನುತ್ತಾರೆ.

2. ವಾದಿ ವಿನೋದಾಚಾರ್ ರವರಿಗೆ ಇಬ್ಬರು ಗಂಡು ಮಕ್ಕಳಿದ್ದು ಹೆಣ್ಣು ಮಕ್ಕಳ ಬಗ್ಗೆ ಗೊತ್ತಿಲ್ಲ. ವಿನೋದಾಚಾರ್ ರವರ ಹೆಣ್ಣುಮಕ್ಕಳ ಮದುವೆ ಮಾಡಿದ ಬಗ್ಗೆ ಸಹ ಗೊತ್ತಿಲ್ಲ. ದಾವಾ ಐಟಂ ನಂ.1 ರಲ್ಲಿ 23 ಗುಂಟೆ ಜಮೀನು ಇದೆ. ಸದರಿ ಜಮೀನಿನ ಚಕ್ಕು ಬಂದಿ ಗೊತ್ತಿಲ್ಲ. ಅದೇ ರೀತಿ ದಾವಾ ಐಟಂ ನಂ.2ರ ಪೂರ್ವಕ್ಕೆ ಸ್ಮಶಾನ, ಪಶ್ಚಿಮಕ್ಕೆ ಲಿಂಗಾಚಾರ್ ರವರ ಜಮೀನು, ಉತ್ತರಕ್ಕೆ ಹೆಮಾವತಿ ನದಿ ಮತ್ತು ದಕ್ಷಿಣಕ್ಕೆ ಶಿವನಂಜೇಗೌಡ ಮತ್ತು ನಾಗರಾಜಾಚಾರ್ ಇವರ ಜಮೀನು ಇದೆ. ದಾವಾ ಐಟಂ ನಂ.5ರ ಪೂರ್ವಕ್ಕೆಃ ಮುಂಚೆ ಗಣೇಶ್ ರವರ ಜಮೀನು ಇದ್ದು ಅವರು ಬೇರೆಯವರಿಗೆ ಕೊಟ್ಟಿದ್ದಾರೆ. ಪಶ್ಚಿಮಕ್ಕ ರಸ್ತೆ, ಉತ್ತರಕ್ಕೆ ಹಳ್ಳ ಮತ್ತು ದಕ್ಷಿಣಕ್ಕೆ ಃ ರಾಜಾಚಾರ್ ಮತ್ತು ವಿನೋದಾಚಾರ್ ರವರ ಜಮೀನು ಇದೆ. ದಾವಾ ಐಟಂ ನಂ.4ರ ಪೂರ್ವಕ್ಕೆ ಚಂದ್ರಶೇಖರ್ ರವರ ಜಮೀನು, ಪಶ್ಚಿಮಕ್ಕೆ ಃ ಒಣಿ, ಉತ್ತರಕ್ಕೆ

ಪ್ರತಿವಾದಿಯರ ಜಮೀನು, ದಕ್ಷಿಣಕ್ಕೆ ಗೌರಮ್ಮರ ಜಮೀನು ಇದೆ. ದಾವಾ ಐಟಂನಂ.4 ರ ಉತ್ತರಕ್ಕೆ ಇರುವ ಪ್ರತಿವಾದಿಯರ ಜಮೀನು ವಿಸ್ತೀರ್ಣ ಎಷ್ಟಿದೆ ಎಂದರೆ ಸಾಕ್ಷಿಯು 29 ಗುಂಟೆ, 23 ಗುಂಟೆ ಜಮೀನು ಇದೆ ಎನ್ನುತ್ತಾರೆ.

3. ರಾಜಾಚಾರ್ ರವರಿಗೆ ಮನೆ ಇದೆ ಎಂದರೆ ಸರಿ. ಪ್ರತಿವಾದಿಯರು ಕೆ.ಅರ್. ನಗರದಲ್ಲಿ ವಾಸವಿದ್ದಾರೆ ಎಂದರೆ ಸರಿ. ವಾದಿ ವಿನೋದಾಚಾರ್ ಊರು ಬಿಟ್ಟು ಎಷ್ಟು ವರುಷ ಅಯಿತು ಎಂದು ಗೊತ್ತಿಲ. ಸಾಕ್ಷಿ ಮುಂದುವರೆದು ಸದರಿಯವರು ನಿವೃತ್ತಿಯಾದ ನಂತರ ಊರಿಗೆ ಬರುತ್ತಿದ್ದರು ಎನ್ನುತ್ತಾರೆ. ವಾದಿಯರು ಮತ್ತು ಪ್ರತಿವಾದಿಯರ ಕುಟುಂಬದಲ್ಲಿ ಮೃತ್ಯುಪತ್ರ ಅಗಿರುವ ವಿಚಾರ ಗೊತ್ತಿಲ್ಲ. ಈಗಲೂ ಕೂಡ ಕೆಲವು ಸ್ವತ್ತಿನ ಖಾತೆಗಳು ವಿನೋದಾಚಾರ್ ರವರ ಹೆಸರಿಗೆ ಇದ್ದು ಅವರ ಮಕ್ಕಳು ಸ್ವಾಧೀನಾದಲ್ಲಿದ್ದಾರೆ ಎಂದರೆ ಸಾಕ್ಷಿಯು ಅದೆಲ್ಲಾ ಗೊತ್ತಿಲ್ಲ ಅದರೆ ಎಲ್ಲರೂ ಒಟ್ಟಿಗೆ ಇದ್ದಾರೆ ಎನ್ನುತ್ತಾರೆ.

4. ದಾವಾ ಐಟಂ ನಂ.5 ರಲ್ಲಿ ವಿಭಾಗ ಅಗಿ ತಲಾ 17 ವರೇ ಗುಂಟೆಗೆ ಎ. ನಾಗರಾಜಾಜರ್ ಬಿನ್ ಲಿಂಗಾಚಾರ್ ಮತ್ತು 1 ನೇ ಪ್ರತಿವಾದಿ ಹೆಸರಿಗೆ ಖಾತೆ ಅಗಿರುವ ವಿಚಾರ ಗೊತ್ತಿಲ್ಲ. ದಾವಾ ಐಟಂ ನಂ.3 ರ ಸ್ವತ್ತು ಚಿಕ್ಕಬಸವಾಚಾರ್ ಗೆ ಕ್ರಯದ ಮೂಲಕ ಬಂದಿದೆ ಎಂದರೆ ಸರಿ. ಸದರಿಯವರು ವಾದಿ ವಿನೋದಾಚಾರ್ ರವರ ಚಿಕ್ಕಪ್ಪ ಎಂದರೆ ಸರಿ. ಅದೇ ರೀತಿ ದಾವಾ ಐಟಂ ನಂ.2 ಸಹ ಚಿಕ್ಕಬಸವಾಚಾರ್ ಗೆ ಕ್ರಯದ ಮೂಲಕ ಬಂದಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ಮತ್ತು 3 ರ ಕ್ರಯದ ವ್ಯವಹಾರಕ್ಕೆ ನಾನು ಸೇರಿಲ್ಲ. ಸದರಿ ದಾವಾ ಐಟಂ ನಂ.2 ಕ್ರಯದ ವಿಚಾರ ನನಗೆ ವಾದಿಯರು ಹೇಳಿಕೊಟ್ಟಿದ ಮೇರೆಗೇ ನಾನು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ನಾನು ಸದರಿ ಜಮೀನಿನ ಪಕ್ಕದಲ್ಲಿರುವುದರಿಂದ ನನಗೆ ಗೊತ್ತು ಎನ್ನುತ್ತಾರೆ. ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಸಮನ್ಸ ಬಂದಿದೆ. ಸದರಿ ಸಮನ್ಸ ನಕಲು ಹರಿದು ಹೋಗಿದ್ದು ನ್ಯಾಯಾಲಯಕ್ಕೆ ತಂದಿಲ್ಲ. ವಾದಿಯರ ಭಾಗಕ್ಕೆ ಬಂದಿರುವ ಜಮೀನುಗಳನ್ನು ನಾನೇ ಮಾಡಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿನೋದಾಚಾರ್ ಹೆಸರಿಗೆ ಇರುವ ಜಮೀನುಗಳನ್ನು ನಾನು ಕ್ರಯಕ್ಕೆ ಪಡೆಯಲು ಅಹ್ವಾನಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿನೋದಾಚಾರ್ ರವರ ಜಮೀನುಗಳನ್ನು ಕ್ರಯಕ್ಕ ಪಡೆದುಕೊಳ್ಳುವ ಉದ್ದೇಶದಿಂದ ವಾದಿಯರ ಪರವಾಗಿ ನ್ಯಾಯಾಲಯದಲ್ಲಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕ್ಕಬಸವಾಚಾರ್ ಮತ್ತು ಲಿಂಗಮ್ಮ ಮರಣಶಾಸನ ಬರೆದು ಕೊಟ್ಟಾಗಿನಿಂದ ಅವರ ಜಮೀನಿನಲ್ಲಿ 1 ನೇ ಪ್ರತಿವಾದಿ

ಯಾವುದೇ ತಂಟೆ ತಕರಾರು ಇಲ್ಲದೆ ಸ್ವಾಧಿನಾನುಭವದಲ್ಲಿದ್ದಾರೆ ಎಂದರೆ ಸರಿ. ವಾದಿಯರು ಈಗಾಗಲೇ ವಿಭಾಗ ಮಾಡಿಕೊಂಡಿದ್ದರೂ ಸಹ ವಿಭಾಗ ಆಗಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿನೋದಾಚಾರ್ ಹಿಸ್ಸೆಗೆ ಬಂದಂತಹ ಜಮಿನುಗಳನ್ನು ಅವರ ಮಕ್ಕಳು ಪಾಳು ಬಿಟ್ಟಿದ್ದಾರೆ ಎಂದರೆ ಸಾಕ್ಷಿಯು ಮಕ್ಕಳು ಮಾಡುತ್ತಿದ್ದಾರೆ ಎನ್ನುತ್ತಾರೆ. ಸದರಿ ವಿನೋದಾಚಾರ್ ಹಿಸ್ಸೆ ಜಮೀನುಗಳಲ್ಲಿ ಕಬ್ಬು ಮತ್ತು ಭತ್ತ ಬೆಳೆದಿದ್ದರು. ಪ್ರತಿವಾದಿಯರು ತಮ್ಮ ಬಾಗಕ್ಕೆ ಬಂದ ಜಮೀನುಗಳಲ್ಲಿ ಯಾವ ಬೆಳೆ ಬೆಳೆದಿದ್ದರೂ ಎಂದರೆ ಸಾಕ್ಷಿಯು ಎಲ್ಲರೂ ಒಟ್ಟಿಗೆ ಮಾಡುತ್ತಿದ್ದರು ಎನ್ನುತ್ತಾರೆ. ವಾದಿಯರು ಬೆಳೆದಿದ್ದ ಕಬ್ಬನ್ನು ಯಾವ ಪ್ಯಾಕ್ರಿಗೆ ಮತ್ತು ಯಾರ ಹೆಸರಿನಲ್ಲಿ ಕಳುಹಿಸಿದ್ದಾರೆ ಗೊತ್ತಿಲ್ಲ. ವಾದಿಯರು ಜಮೀನುಗಳಳಿಗೆ ಯಾರು ಕಂದಾಯ ಕಟ್ಟುತ್ತಿದ್ದಾರೆ ಎಂದು ಗೊತ್ತಿಲ್ಲ ವಾದಿಯರು ಪ್ರತಿವಾದಿಯರ ಮೇಲೆ ಯಾವ ವಿಚಾರಕ್ಕೆ ಕೇಸು ಹಾಕಿದ್ದಾರೆ ಎಂದು ಗೊತ್ತಿಲ್ಲ. ನನ್ನ ಮುಖ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ.

**ಮರು ವಿಚಾರಣೆ ಃ ಇಲ್ಲ.**

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಸಾ ಓ ಹೇ ಕೇ ಸ ಅದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.**
**ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.**